ಸಾಕ್ಷಿಯನ್ನು ದಿನಾಂಕಃ 8.9.2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಕೆ ಸಿ ಎನ್ ವಕೀಲರಿಂದ

ಬಾಲನ್ ಎಂಬುವವರು ನನ್ನ ದೊಡ್ಡಪ್ಪ. ಪ್ರತಿವಾದಿಗಳು ನನ್ನ ದೊಡ್ಡಪ್ಪನ ಮಕ್ಕಳು. ನನ್ನ ದೊಡ್ಡಪ್ಪನಿಗೆ ಮೂರು ಜನ ಹೆಣ್ಣು ಮಕ್ಕಳೆಂದರೆ ಸರಿ. ನನ್ನ ದೊಡ್ಡಪ್ಪನಾದ ವಿ. ಬಾಲನ್ ರವರು ನಿವೇಶನ ಸಂ 1213/1316 ರನ್ನು ದಿಃ10.10.1973 ರಲ್ಲಿ ಡೇವಿಡ್ ರವರಿಂದ 29 ಇಂಟೂ 37 ಅಡಿಗಳನ್ನು ಖರೀದಿ ಮಾಡಿರುತ್ತಾರೆ. ಸದರಿ ಕ್ರಯಪತ್ರವನ್ನು ನೋಡಿರುತ್ತೇನೆ. ನನ್ನ ದೊಡ್ಡಪ್ಪ ಖರೀದಿ ಮಾಡಿದ ಪೂರ್ತಿ ವಿಸ್ತೀರ್ಣ 29 ಇಂಟೂ 37 ಅಡಿಗಳಲ್ಲಿ ಮನೆ ಕಟ್ಟಿರುತ್ತಾರೆಂದರೆ ಸರಿ. ನನ್ನ ದೊಡ್ಡಪ್ಪ ಖರೀದಿ ಮಾಡಿರುವ ಆಸ್ತಿಯಾದ 29 ಇಂಟೂ 37 ಅಡಿಗಳಿಗೂ ನನಗಾಗಲಿ ಮತ್ತು ನನ್ನ ಕುಟುಂಬದವರಿಗಾಗಲಿ ಯಾವುದೇ ಸಂಬಂಧ ಇಲ್ಲ. ನಿಪಿ24 ರ ಕ್ರಯಪತ್ರದಲ್ಲಿ ಉತ್ತರ ದಕ್ಷಿಣ 40 ಅಡಿ ಇರುತ್ತದೆ ಎಂದರೆ ಸರಿ. ನಾನು 37 ಅಡಿ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ದೊಡ್ಡಪ್ಪ 1 ನೇಪ್ರತಿವಾದಿಗೆ ನಿಪಿ25 ರಂತೆ ದಾನಪತ್ರ

ಮಾಡಿರುತ್ತಾರೆಂದರೆ ಸರಿ, ಸಾಕ್ಷಿಯು ಮುಂದುವರೆದು ದಾನಪತ್ರ ಮಾಡುವಾಗ ಖಾಲಿ ನಿವೇಶನ ಇತ್ತು. ನನ್ನ ದೊಡ್ಡಪ್ಪ ಮನೆ ಕಟ್ಟಿದ ನಂತರ ಬಾಡಿಗೆಗೆ ಬಿಟ್ಟಿರುತ್ತಾರೆ. ನಾನೂ ಸಹ ನನ್ನ ದೊಡ್ಡಪ್ಪನ ಮನೆಯಲ್ಲಿ ಬಾಡಿಗೆದಾರನಾಗಿ 7-8 ವರ್ಷಗಳ ಕಾಲ ಇದ್ದೆ. ನನ್ನ ತಂದೆ ನನ್ನ ದೊಡ್ಡಪ್ಪನಿಗೆ ಬಾಡಿಗೆ ಕೊಡದೇ ಕುಟುಂಬಕ್ಕೆ ಬೇಕಾದ ದಿನಸಿ ವಸ್ತುಗಳನ್ನು ಕೊಡುತ್ತಿದ್ದರು. ನಾನು ಮತ್ತು ನಮ್ಮ ಕುಟುಂಬದವರು ದೊಡ್ಡಪ್ಪನ ಬಾಡಿಗೆ ಮನೆಯಿಂದ ಖಾಲಿ ಮಾಡಿ 15 ವರ್ಷಗಳಾಗಿರುತ್ತವೆ. ನನ್ನ ದೊಡ್ಡಪ್ಪ ಮತ್ತು ಅವರ ಕುಟುಂಬದವರು ಅವರ ಮನೆಯನ್ನು ಯಾರಿಗೆ ಕೊಟ್ಟಿರುತ್ತಾರೆಂದು ಗೊತ್ತಿಲ್ಲ.

2. ಸಾಕ್ಷಿಗೆ ಇ ಖಾತಾವನ್ನು ತೋರಿಸಿ ಅದು ನನ್ನ ದೊಡ್ಡಪ್ಪನ ಮನೆ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಇ ಖಾತಾದಲ್ಲಿರುವ 1 ನೇಪ್ರತಿವಾದಿಯ ಭಾವಚಿತ್ರವನ್ನು ನೋಡಿ ಗುರ್ತಿಸಿರುತ್ತಾರೆ. ನಾನು ಇ ಖಾತಾದಲ್ಲಿರುವ ಮನೆಯನ್ನು ನೋಡಿ ಸುಮಾರು 15 ವರ್ಷಗಳಾಗಿರುತ್ತೆ. ಇ ಖಾತಾದಲ್ಲಿರುವ ಮನೆಯ ಮನೆ ನನಗೆ ಹಕ್ಕು ಇರುವುದಿಲ್ಲ. ಇ ಖಾತಾಗೆ ಸಂಬಂಧಪಟ್ಟಂತೆ ದಾಖಲೆಗಳನ್ನು ಅಂದರೆ ಮೂಲ ಪತ್ರ, ಇ ಖಾತಾ, ಬಾಲನ್

ರವರ ಹೆಸರಿನಲ್ಲಿರುವ ಇ ಖಾತಾ, ಲೈಸನ್ಸ ಜೊತೆಗೆ ಪ್ಲಾನ್ ಇತ್ತೀಚೆಗೆ ನೋಡಿರುತ್ತೇನೆ. ಸಾಕ್ಷಿಯು 1 ನೇಪ್ರತಿವಾದಿ ಹೆಸರಿನಲ್ಲಿರುವ ಇ ಖಾತಾವನ್ನು ನೋಡಿ ಗುರ್ತಿಸಿರುತ್ತಾರೆ. ಸದರಿ ದಾಖಲೆಯನ್ನು ನಿಡಿ1 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು ಅನುಮತಿಸಿ ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).

ಓದಿ ಹೇಳಿ ಕೇಳಿ ಸರಿ ಇದೆ

(ವಿನೋದ್ ಕುಮಾರ್ ಎಂ )
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಅಪರ ಜೆ.ಎಂ.ಎಫ್.ಸಿ, ಕೆಜಿಎಫ್.